ದುಃಖ ಆಗ್ತದ...

ಏನಂದ್ರ... ನಮ್ಮ ದೇಶದೊಳಗೆ ಜಾತಿವ್ಯವಸ್ಥೆ ಅಂದ್ರೆ ಶ್ರೇಣೀಕೃತ ಅಲ್ವಾ? ಇದೊಂದು ಏಣಿ ಇದ್ದಾಂಗ, ಬ್ರಾಹ್ಮಣರಿಗೆ ಲಿಂಗಾಯತರು ಅಸ್ಪೃಶ್ಯರು, ಲಿಂಗಾಯತರಿಗೆ ಕುರುಬರು ಅಸ್ಪೃಶ್ಯರು, ಕುರುಬರಿಗೆ ವಾಲ್ಮೀಕಿ ಜನಾಂಗದವರು ಅಸ್ಪೃಶ್ಯರು... ಮನುಷ್ಯನ ಮನಸ್ಸು ಬದಲಾಗದೆ ಇದ್ದರೆ ಇದಕ್ಕೆ ಕೊನೆ ಎಲ್ಲಿದೆ? ಅಂಬೇಡ್ಕರ್ ಥರದ ಒಬ್ಬ ನಾಯಕ ನಮ್ಮ ಸಮುದಾಯಕ್ಕೂ ಇದ್ದಿದ್ದರೆ ಏನಾದ್ರೂ ಆಗ್ತಿತ್ತೋ ಏನೋ ಮೇಡಂ... ನಮ್ಮ ದೇಶಕ್ಕ ಸ್ವಾತಂತ್ರ್ಯ ಬಂದು ಎಪ್ಪತ್ತು ವರ್ಷ ಆಯ್ತು, ಎಸ್.ಸಿ./ಎಸ್.ಟಿ. ಸಮುದಾಯಗಳಿಗೆ ಸಮಾನವಾಗಿ ಗೊಂದಲಿಗರಿಗೆ ಯಾವ ಅವಕಾಶಗಳೂ ಇಲ್ಲ. ಅವರೂ ನಮ್ಮ ಹಾಗೆ ನೂರಾರು ವರ್ಷದಿಂದ ಕಷ್ಟ ಅನುಭವಿಸ್ಯಾರ, ಅದು ಬೇರೆ ಮಾತು. ಆದ್ರೆ ಆರ್ಥಿಕ, ಸಾಮಾಜಿಕ ನೆಲೆಯಲ್ಲಿ ಬಹಳಾ ತಾಪತ್ರಯ ದೊಳಗಿರೋ ಸಮುದಾಯಗಳನ್ನ ಸರ್ಕಾರ ಗಮನಿ ಸೋದಿಲ್ಲ ಅನ್ನೋದು ನನ್ನ ವೈಯಕ್ತಿಕ ನೋವು. ಒಮ್ಮೆ ನಾನು ಪ್ರಮುಖ ದಲಿತ ಲೇಖಕರೊಬ್ಬರಿಗೆ 'ಸರ್, ನಿಮ್ಮ ಕಮ್ಯುನಿಟಿ ಒಳಗ ಈಗ ಆರ್ಥಿಕವಾಗಿ ಮುಂದಿರೋ ಜನ ಅದಾರ, ರಾಜಕಾರಣದಲ್ಲಿದ್ದಾರ, ಆರ್ಥಿಕ ಭದ್ರತೆ ಇರೋ ಮಂದಿನೂ ಇದ್ದಾರ, ವಿಚಾರವಾದಿಗಳಿದ್ದೀರಿ... ಎರಡು ಹೊತ್ತು ಹೊಟ್ಟೆಗೆ ಉಣ್ಣೋರು ಒಂದು ಹೊತ್ತು ಉಣ್ಣೋರ ಬಗ್ಗೆ ಕಾಳಜಿ ಮಾಡಬೇಕಾಗತ್ತ. ನಿಮ್ಮಂಥ ವಿಚಾರವಂತರು ನಮ್ಮ ಸಮುದಾಯದ ಬಗ್ಗೆ ಪ್ರಸ್ತಾಪ ಮಾಡಬೇಕು...' ಅಂದೆ. ಅವರು 'ನೀವು ಹೇಳೋದು ನಿಜ' ಅಂದ್ರು. ಆದರೆ ಆ ಮಾತು ಅಲ್ಲಿಗೇ ಮುಗಿಯಿತು..



**◆ ರಾಜಕೀಯ ಇಚ್ಛಾಶಕ್ತಿಯೇ ಇಲ್ಲದ ಈ ಕಾಲದಲ್ಲಿ ಬದಲಾವಣೆ ಸಾಧ್ಯ ಅನ್ನಿಸುತ್ತಾ? ಇದಕ್ಕೆಲ್ಲ ಗಮನ ಕೊಡುವಂಥ ಅಂತಃಕರಣದ, ದೂರದೃಷ್ಟಿಯುಳ್ಳ ನಾಯಕರು ಇದ್ದಾರಾ?**

ಎಲ್ಲಿಂದ ಬದಲಾವಣೆ ಅನ್ನೂದೇ ದೊಡ್ಡ ಸಮಸ್ಯೆ... ಹತ್ತು ವರ್ಷದಿಂದ ನನ್ನ ಕೈಲಾಗುವಷ್ಟು ಮಟ್ಟಿಗೆ ಹೊಸ ವಿಚಾರ ಬಿತ್ತೋಕೆ ಪ್ರಯತ್ನ ಮಾಡ್ತಾ ಇದ್ದೀನಿ, ಯಾರೂ ಅಷ್ಟು ಸ್ಪಂದಿಸಲ್ಲ . ನೋವಾಗ್ತತಿ... ನಾವೂ ಬೇರೆಯವರಿಗೆ ಸಮಾನ ಅನ್ನೋ ಪ್ರಜ್ಞೆ ನಮ್ಮ ಜನಕ್ಕೆ ಯಾವಾಗ ಬರ್ತದೋ ಏನೋ... ನಮ್ಮ ಕಮ್ಯುನಿಟಿ ಒಳಗೇನೆ ಕೆಲವರು ವಿದ್ಯಾವಂತರದಾರ, ಅವರ ಹತ್ರ ಇದನ್ನ ಪ್ರಸ್ತಾಪ ಮಾಡಿ ನಾವೆಲ್ಲ ಇದನ್ನ ವಿರೋಧಿಸಬೇಕ್ರಿ ಅಂದ್ರ, ಅವರಂತಾರ, 'ಇಲ್ರೀ, ನಮ್ಮ ಹಿರೇರು ಮಾಡಿದ ಪದ್ಧತಿನ ವಿರೋಧ ಮಾಡಿ ಮೀರ್‍ಕೊತಾ ಹೋದ್ರ ನಮ್ ಜಾತಿ ಎಲ್ಲಿ ಉಳಿತೈತಿ, ನಮ್ಮ ಸಂಸ್ಕೃತಿ, ಸಂಪ್ರದಾಯ ಎಲ್ಲಿ ಉಳಿತೈತಿ' ಅಂತಾರ. ಇದನ್ನ ಬದಲಾಯಿಸೋದು ಹೇಗೆ ಗೊತ್ತಿಲ್ಲ. ಇತ್ತೀಚೆಗೆ ಕೆಲವು ಪ್ರಜ್ಞಾವಂತರು ಹುಟ್ಟಕೊಂಡಿದ್ದಾರೆ. ಅವರಲ್ಲಿ ಹಿರಿಯರು, ಕಿರಿಯರೂ ಇದ್ದರೂ ಈ ಸಂಖ್ಯೆ ಇನ್ನೂ ಹೆಚ್ಚಾಗಬೇಕು. ನಾವು ಸಮಾನತೆ, ಪ್ರಜಾಪ್ರಭುತ್ವ ಅಂತ ಮಾತಾಡ್ತೀವಿ, ಇದೇ ಪ್ರಣಾಳಿಕೆ ಇಟ್ಟುಕೊಂಡು ಜನ ಅಧಿಕಾರಕ್ಕೆ ಬರ್ತಾರ. ಬದಲಾಗಬೇಕು ಅನ್ನೋದು ನಮ್ಮ ಜನದೊಳಗೂ ಇಲ್ಲ, ಇವರನ್ನ ಮೇಲೆತ್ತಬೇಕು ಅನ್ನೋದು ರಾಜಕಾರಣಿಗಳಿಗೂ ಇಲ್ಲ. ಅಂದ ಮೇಲೆ ದಾರಿ ಇರಾಕ್ಕೇನೂ ಸಾಧ್ಯ ಇಲ್ಲ. ನನ್ನ ಪೀಳಿಗೆ ಕಥೆ ಮುಗೀತು ಬಿಡಿ, ಈ ಪರಿಸ್ಥಿತಿಯೊಳಗೇ ಇದ್ರೆ ಮುಂದಿನ ಪೀಳಿಗೆ ಸಹಿತ ಸಮಾಜದ ಮುಖ್ಯ ಪ್ರವಾಹಕ್ಕೆ ಬರೋದು ಕಷ್ಟ ಐತಿ.

**◆ ಗೋಟಗೋಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ 'ಗೊಂದಲದ ಕತೆ' ಹೇಳೋದನ್ನ ಕಲಿಸುವ ಪ್ರಯತ್ನ ನಡೆದಿದೆ ಅಂತ ನಾನು ಕೇಳ್ಪಟ್ಟೆ. ರಕ್ತದೊಳಗೇ ಸೇರಿಕೊಂಡಿರೋ ಒಂದು ಕಲೆಯನ್ನ, ಅದರ ನೆನಪುಗಳನ್ನ ಹೀಗೆ ಹೊರಗಿನಿಂದ ಹೇಳಿಕೊಟ್ಟು ಕಲಿಸಬಹುದಾ?**

ಹೌದ್ರಿ ಕಲಿಸೋ ಪ್ರಯತ್ನ ನಡದಾದ. 'ಗೊಂದಲದ ಕತೆ' ಹೇಳಬೇಕಂದ್ರ ಮೂರು ಅಥವಾ ನಾಲ್ಕು ಜನ ಇರಬೇಕು. ಒಬ್ಬ ನಿರೂಪಣೆ ಮಾಡ್ತಾನ, ಇನ್ನೊಬ್ಬ ಸಂಬಲ ವಾದ್ಯ ನುಡಿಸ್ತಾನ, ಮತ್ತೊಬ್ಬ ಚೌಡಿಕಿ